ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
**DEPARTMENT OF STATE EDUCATIONAL RESEARCH AND TRAINING**
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

ಡಿಎಸ್‌ಇಆರ್‌ಟಿ
DSERT

Phone - 080 26980100
Fax - 080 26422377

ಸಂಖ್ಯೆ:E-9951/DSERT/EVG/5,8 ತ.ವಾ.ಪ.ಮೌಲ್ಯಾಂಕನ/2022-23 ದಿನಾಂಕ: 13-12-2022

**ಸುತ್ತೋಲೆ**

ವಿಷಯ: 2022-23 ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿನ 5 ಮತ್ತು8 ನೇ ತರಗತಿಯ ವಾರ್ಷಿಕ ಪರೀಕ್ಷೆಯ ಮೌಲ್ಯಾಂಕನ ನಡೆಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರ ಕಛೇರಿ ಸಾ.ಶಿ.ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು ರವರ ಸಂಖ್ಯೆ: E-870867-DPII- CPIOC7-2(PLM)/3/2022 ದಿನಾಂಕ:12.12.2022

2. ಆಯುಕ್ತರ ಕಛೇರಿ ಸಾ.ಶಿ.ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು ರವರ ಜ್ಞಾಪನಾ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇವಿಜಿ/ ಕ.ಚೇ/ಮೌಲ್ಯಾಂಕನ/01/ 2021-22 ದಿನಾಂಕ: 28.04.2022

3. ಆಯುಕ್ತರ ಕಛೇರಿ ಸಾ.ಶಿ.ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಸಿ4(6)ಶೈ.ವ.ಪ್ರಾ-01/2022-23 ದಿನಾಂಕ:20.04.2022

4. ಆಯುಕ್ತರ ಕಛೇರಿ ಸಾ.ಶಿ.ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು 2022-23 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿಯ ಅನುಬಂಧ-1(Signed on 20-04-2022)

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2022-23 ನೇ ಶೈಕ್ಷಣಿಕ ಸಾಲಿನಲ್ಲಿ ಮಕ್ಕಳ ಕಲಿಕಾ ಕೊರತೆಯನ್ನು ನೀಗಿಸಲು **'ಕಲಿಕಾ ಚೇತರಿಕೆ 'ಉಪಕ್ರಮವನ್ನು** ಅನುಷ್ಠಾನಗೊಳಿಸಲಾಗಿದ್ದು, ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ನಿರಂತರ ಅನುಪಾಲನೆ ಜಾರಿಯಲ್ಲಿದೆ.

ಈ ನಿಟ್ಟಿನಲ್ಲಿ ಉಲ್ಲೇಖಿತ ಪತ್ರ (1) ರನ್ವಯ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯ ಪಠ್ಯಕ್ರಮದ ಎಲ್ಲಾ ಶಾಲೆಯ 5 ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ ಕಲಿಕಾ ಫಲ/ಸಾಮರ್ಥ್ಯಗಳನ್ನಾಧರಿಸಿದ ಏಕರೂಪದ ಸಾಧನಾ ಮತ್ತು ತಂತ್ರ ಬಳಸಿ ವಾರ್ಷಿಕ ಪರೀಕ್ಷೆಗಳನ್ನು ನಡೆಸುವ ಮೂಲಕ ಕಲಿಕಾಪ್ರಗತಿಯನ್ನು ತಿಳಿದು, ವಿಶ್ಲೇಷಿಸಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ಬಲವರ್ಧನೆಗೊಳಿಸುವ ಉದ್ದೇಶ ಹೊಂದಿದೆ.

2022-23 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಕುರಿತಾದ ಉಲ್ಲೇಖ(2)ರ ವಾರ್ಷಿಕ ಕಾರ್ಯಸೂಚಿಯನ್ವಯ ಶಾಲೆಯು 2022-23 ನೇ ಸಾಲಿನಲ್ಲಿ 1 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೆ ಕಲಿಕಾಚೇತರಿಕೆ, ಪಠ್ಯವಸ್ತು ಬೋಧನೆ, ಮೌಲ್ಯಾಂಕನ ಕ್ರಮಗಳನ್ನು ಅನುಸರಿಸಿದೆ. ಪ್ರಸಕ್ತ ವರ್ಷದಲ್ಲಿ ಅರ್ಧ ಶೈಕ್ಷಣಿಕ ವರ್ಷ ಪೂರ್ಣಗೊಂಡಿದ್ದು, ಈಗಾಗಲೇ FA-1, FA-2 ಹಾಗೂ SA-1 ಮೌಲ್ಯಾಂಕನಗಳನ್ನು ಪೂರ್ಣಗೊಳಿಸಿ, SATS ನಲ್ಲಿ ಪ್ರಗತಿ ದಾಖಲಿಸಲಾಗಿರುತ್ತದೆ. ಆದ್ದರಿಂದ ಸದರಿ 2022-23 ನೇ ಶೈಕ್ಷಣಿಕ ವರ್ಷದಲ್ಲಿ ವಾರ್ಷಿಕ ಪರೀಕ್ಷೆ ನಿರ್ವಹಿಸುವ ಬದಲಾಗಿ ಉಳಿದ ಅರ್ಧವರ್ಷಕ್ಕೆ ಸೀಮಿತಗೊಳಿಸಿ ನವೆಂಬರ್ 2022 ರಿಂದ ಮಾರ್ಚ್ 2023 ರ ಮೊದಲನೇ ವಾರದೊಳಗೆ ನಿರ್ವಹಿಸಿದ ಪಠ್ಯ ವಸ್ತುವನ್ನು ಆಧರಿಸಿ ವಾರ್ಷಿಕ ಪರೀಕ್ಷೆ (SA-2) ನಡೆಸಲಾಗುತ್ತಿದೆ.

ಹಾಗಾಗಿ ಇದೇ ಕ್ರಮವನ್ನು 5 ಮತ್ತು 8 ನೇ ತರಗತಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷಾ ಮೌಲ್ಯಾಂಕನಕ್ಕೂ ಮುಂದುವರೆಸಲಾಗುತ್ತಿದ್ದು, ಈ ಕೆಳಸೂಚಿಸಿದಂತೆ ಮೌಲ್ಯಾಂಕನ ನಿರ್ವಹಿಸುವುದು.

**5 ಮತ್ತು 8 ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆಯ ವಿಧಾನ :**

| ಮೌಲ್ಯಾಂಕನದ ವಿವರ | ಅಂಕಗಳು |
|---|---|
| FA-1 | 15 |
| FA-2 | 15 |
| SA-1 | 20 |
| FA-3 | 15 |
| FA-4 | 15 |
| SA-2 | 20 |
| **ಒಟ್ಟು** | **100** |

I/8652/2022

ಪ್ರಸಕ್ತ ಸಾಲಿನಲ್ಲಿ 5 ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು (SA-2) 50 ಅಂಕಗಳಿಗೆ ನಿರ್ವಹಿಸಲಾಗುತ್ತಿದ್ದು, ಇದರಲ್ಲಿ 10 ಅಂಕಗಳು ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ ಪರೀಕ್ಷೆಯಾಗಿರುತ್ತದೆ. ಮೌಖಿಕ ಪರೀಕ್ಷೆಯ 1 0 ಅಂಕಗಳು ಹಾಗೂ ಲಿಖಿತ ಪರೀಕ್ಷೆಯ 40 ಅಂಕಗಳನ್ನು SA-2 ಗೆ ನಿಗದಿ ಪಡಿಸಿದ ಮಾನದಂಡದಂತೆ ಪರಿವರ್ತಿಸಿ ಪರಿಗಣಿಸುವುದು.

ಈ ಮೇಲಿನ ಕೋಷ್ಟಕದಲ್ಲಿ ನಮೂದಿಸಿದಂತೆ ಪ್ರತಿ ವಿದ್ಯಾರ್ಥಿಯು 100 ಅಂಕಗಳಿಗೆ ಶೇಕಡಾ 35 ಅಂಕಗಳಿಸಿದಲ್ಲಿ **'ಕಲಿಕೆಯಲ್ಲಿ ಪ್ರಗತಿ ಸಾಧಿಸಿರುವ ವಿದ್ಯಾರ್ಥಿ'** ಎಂದು ಪರಿಗಣಿಸುವುದು. ಇಲ್ಲವಾದಲ್ಲಿ **'ಕಲಿಕೆಯಲ್ಲಿಇನ್ನೂ ಪ್ರಗತಿ ಸಾಧಿಸಬೇಕಿರುವ ವಿದ್ಯಾರ್ಥಿ'** ಎಂದು ಪರಿಗಣಿಸಿ, 2023-24 ನೇ ಸಾಲಿನ ಜೂನ್ ಮತ್ತು ಜುಲೈ ತಿಂಗಳ ಅಂತ್ಯದೊಳಗೆ ಪರಿಹಾರ ಬೋಧನೆ ಕೈಗೊಂಡು ಶಾಲಾ ಹಂತದಲ್ಲಿಯೇ ಮೌಲ್ಯಾಂಕನಗಳನ್ನು ನಿರ್ವಹಿಸಿ ಸಂಬಂಧಿಸಿದ ವಿದ್ಯಾರ್ಥಿಗಳ ಕಲಿಕಾ ಬಲವರ್ಧನೆಗೊಳಿಸುವುದು. **ಯಾವುದೇ ವಿದ್ಯಾರ್ಥಿಯನ್ನು 'ಕಲಿಕಾ ಪ್ರಗತಿ ಸಾಧಿಸದ ವಿದ್ಯಾರ್ಥಿ'** ಯೆಂದು **ಪರಿಗಣಿಸಿ ಅನುತ್ತೀರ್ಣಗೊಳಿಸುವಂತಿಲ್ಲ.**

ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಅಭಿವೃದ್ಧಿ) ರವರು ಹಾಗೂ ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಗತ್ಯ ಸಿದ್ಧತೆಯೊಂದಿಗೆ ಪರೀಕ್ಷೆ ಹಾಗೂ ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸುವುದು. ಆ ಮೂಲಕ ಶಾಲೆಗಳಲ್ಲಿ ಗುಣಮಟ್ಟದ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಪರಿಣಾಮಕಾರಿಯನ್ನಾಗಿಸಲು ಅಗತ್ಯ ಕ್ರಮವಹಿಸುವುದು.

( ಮಾನ್ಯ ರಾಜ್ಯ ಯೋಜನಾ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

Signed by Sumangala V
ನಿರ್ದೇಶಕರು
Date: 29-12-2022 13:57:58
ಡಿ.ಎಸ್.ಇ.ಆರ್.ಟಿ, ಬೆಂಗಳೂರು

ಗೆ,

1. ರಾಜ್ಯದ ಎಲ್ಲಾಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಸಾ.ಶಿ.ಇ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
5. ಅಪರ ಆಯುಕ್ತರು, ಸಾ.ಶಿ.ಇ ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಸಾ.ಶಿ.ಇ ಕಲಬುರಗಿ ಆಯುಕ್ತಾಲಯರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅನುಪಾಲನೆಗಾಗಿ
7. ಕಛೇರಿ ಪ್ರತಿ.